**ದಿನಾಂಕ: 22-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಕೆ ಎಲ್ ಎನ್ ವಕೀಲರಿಂದ ಆರೋಪಿ ಪರವಾಗಿಃ**

6) ನಿಪಿ 1 ಚೆಕ್ಕನ್ನು ಆರೋಪಿಯೇ ದಿಃ 02-01-2021 ರಂದು ಬರೆದುಕೊಟ್ಟಿರುತ್ತಾರೆ. ನಿಪಿ 1 ನ್ನು ನಮ್ಮ ಊರಿನಲ್ಲಿಯೇ ಬರೆದುಕೊಟ್ಟಿರುತ್ತಾರೆ. ಆರೋಪಿಯು ಭತ್ತ, ಜೋಳದ ವ್ಯಾಪಾರ ಮಾಡುತ್ತಾರೆ. 5-6 ವರ್ಷಗಳ ಹಿಂದೆ ಆರೋಪಿಗೆ ನಾನು ಭತ್ತ , ಜೋಳ ಕೊಟ್ಟಿದ್ದೆ. ನನ್ನ ಮತ್ತು ಆರೋಪಿಯ ನಡುವೆ ಹಿಂದೆ ಯಾವುದೇ ಹಣ ಕೊಟ್ಟು ತೆಗೆದದುಕೊಳ್ಳುವ ವ್ಯವಹಾರ ಇರಲಿಲ್ಲ. ದಿಃ 02-01-2021 ರಂದೇ ಆರೋಪಿ ಮ. 1-30 ಗಂಟೆಗೆ ಬಂದು ನನ್ನ ಹತ್ತಿರ ಹಣ ಕೇಳಿದರು. ಆ ದಿನವೇ ಆರೋಪಿಗೆ ಹಣ ಕೊಟ್ಟೆ. ಶುಂಠಿ ಮತ್ತು ಮೆಣಸಿನ ಕಾಯಿ ಮಾರಾಟ ಮಾಡಿದ ಹಣ ಇದ್ದು, ಅದನ್ನು ಆರೋಪಿಗೆ ಕೊಟ್ಟಿದ್ದೆ.

7) ನನಗೆ 4 ಎಕರೆ ಜಮೀನು ಇದ್ದು , ಈ ಬಗ್ಗೆ ಪಹಣಿ ಕೊಟ್ಟಿದ್ದೇನೆ. ಪಹಣಿ ನನ್ನ ಹೆಸರಿನಲ್ಲಿಯೇ ಇರುತ್ತದೆ. ಶುಂಠಿ ಮತ್ತು ಮೆಣಸಿನ ಕಾಯಿ ಬೆಳದ ಬಗ್ಗೆ ಪಹಣಿಯಲ್ಲಿ ನಮೂದು ಇರುತ್ತದೆ. ಶುಂಠಿ 1 ಎಕರೆಗೆ ಹಾಕುತ್ತೇನೆ , ಮೆಣಸಿನ ಕಾಯಿ ಗಿಡಗಳನ್ನು ಒಂದುವರೆ ಎಕರೆಗೆ ಹಾಕುತ್ತೇನೆ. ಶುಂಠಿಯಲ್ಲಿ 3 ಲಕ್ಷ ಬಂದಿದ್ದು, ಮೆಣಸಿನ ಕಾಯಿಯಲ್ಲಿ ಒಂದುವರೆ ಲಕ್ಷ ಬಂದಿತ್ತು. ರೂ, 50 ಸಾವಿರ ಖರ್ಚು ಬಂದಿತ್ತು.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಲಾಯಿತು. ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .